ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ ನಿಯಮಿತ

[ಕರ್ನಾಟಕ ಸರ್ಕಾರದ ಸಂಪೂರ್ಣ ಸ್ವಾಮ್ಯಕ್ಕೆ ಒಳಪಟ್ಟಿದೆ.]
ರವರಕಛೇರಿ,
ಸಹಾಯಕಕಾರ್ಯನಿರ್ವಾಹಕಇಂಜಿನಿಯರ(ವಿ),
ಕಾರ್ಯ& ಪಾಲನಾ ಉಪ ವಿಭಾಗ,
ಹೊನ್ನಾವರತಾಲ್ಲೂಕು[ಉ.ಕ] ಜಿಲ್ಲೆ–581 334

Tel: 08387- 223033

HUBLI ELECTRICITY SUPPLY COMPANY LIMITED

[Wholly owned Govt. of Karnataka undertaking]

Office of the,
Assistant Executive Engineer [Elec.]
O & M Sub Division,Honnavar.
[U.K] District -581 334

Web: www.hescom.co.in
E-mail: aeehnvr@gmail.com

Corporate Identify Number (CIN) : **U31401KA2002SGC030437**

ಕ್ರಮಾಂಕ:.ಸ.ಕಾ.ನಿ.ಇಂ(ವಿ)/ಹೊನ್ನಾವರ/ಸ.ಇಂ(ತಾ)/20–21/ 1455-64 ದಿನಾಂಕ: 26 JUN 2020

**ಗ್ರಾಹಕರ ಸಂವಾದ ಸಭೆಯ ನಡಾವಳಿಕೆ:**

**ದಿನಾಂಕ 20.06.2020ರಂದು ಹೊನ್ನಾವರ ಉಪ–ವಿಭಾಗ ಹೆಸ್ಕಾಂ ಕಛೇರಿಯಲ್ಲಿ ಶ್ರೀ ಶಂಕರ ಗೌಡ, ಪ್ರ. ಸಹಾಯಕ ಕಾರ್ಯನಿರ್ವಾಹಕ ಇಂಜಿನೀಯರ್(ವಿ), ಹೆಸ್ಕಾಂ, ಕಾ. & ಪಾ. ಉಪ–ವಿಭಾಗ, ಹೊನ್ನಾವರ ಇವರ ಅಧ್ಯಕ್ಷತೆಯಲ್ಲಿ ನಡೆದ ಗ್ರಾಹಕರ ಸಂವಾದ ಸಭೆಯಲ್ಲಿ ಈ ಕೆಳಗಿನಂತೆ ಅಧಿಕಾರಿಗಳು ಹಾಗೂ ಗ್ರಾಹಕರು ಹಾಜರಿದ್ದರು.**

1. ಶ್ರೀ ಶಂಕರ ಗೌಡ, ಪ್ರ. ಸಹಾಯಕ ಕಾರ್ಯನಿರ್ವಾಹಕ ಇಂಜಿನೀಯರ್ (ವಿ), ಹೆಸ್ಕಾಂ, ಹೊನ್ನಾವರ.
2. ಶ್ರೀಮತಿ ರಾಧಾ ಭಟ್ಟ, ಸಹಾಯಕ ಇಂಜಿನೀಯರ್(ವಿ), ತಾಂತ್ರಿಕ ಶಾಖೆ, ಹೆಸ್ಕಾಂ, ಹೊನ್ನಾವರ.
3. ಕು. ನವ್ಯಶ್ರೀ, ಸಹಾಯಕ ಲೆಕ್ಕಾಧಿಕಾರಿ, ಹೆಸ್ಕಾಂ, ಹೊನ್ನಾವರ.
4. ಶ್ರೀ ಎಮ್.ಎನ್. ಗುನಗಾ, ಹಿರಿಯ ಸಹಾಯಕ, ಹೆಸ್ಕಾಂ, ಹೊನ್ನಾವರ.
5. ಶ್ರೀ ಆನಂದರಾವ್ ಪಿ. ಶಾಖಾಧಿಕಾರಿ, ಗೇರುಸೊಪ್ಪ ಶಾಖೆ, ಹೆಸ್ಕಾಂ, ಹೊನ್ನಾವರ
6. ಶ್ರೀ ಗಜಾನನ ವಿ. ನಾಯ್ಕ, ಪ್ರ. ಶಾಖಾಧಿಕಾರಿ, ಗ್ರಾಮೀಣ ಶಾಖೆ–1, ಹೆಸ್ಕಾಂ, ಹೊನ್ನಾವರ
7. ಶ್ರೀ ಎಸ್.ಕೆ. ಶೆಟ್ಟಿ, ಹಡಿನಬಾಳ, ಹೊನ್ನಾವರ.
8. ಶ್ರೀಮತಿ ತಾರಾ, ಹೊನ್ನಾವರ.
9. ಶ್ರೀ ರಾಮಚಂದ್ರ ಗೌಡ, ಮಂಕಿ, ಹೊನ್ನಾವರ.
10. ಶ್ರೀ ಹರೀಶ ನಾಯ್ಕ, ಹೊನ್ನಾವರ.
11. ಶ್ರೀ ತಬ್ರೀಜ್ ಖಾನ, ಸರಳಗಿ, ಹೊನ್ನಾವರ.
12. ಶ್ರೀ ಮಹಮ್ಮದ ಶಫಿ, ಸರಳಗಿ, ಹೊನ್ನಾವರ.
13. ಶ್ರೀ ಅಬ್ದುಲ್ ಸತ್ತಾರ, ಹೊನ್ನಾವರ
14. ಶ್ರೀ ಸಾದಿಕ ಬಿ, ಹೊನ್ನಾವರ.
15. ಶ್ರೀ ರಿಯಾಜ್ ಹುಸೇನ್, ಉಪ್ಪೋಣಿ, ಹೊನ್ನಾವರ.
16. ಶ್ರೀ ಮಹಮ್ಮದ ಗೌಸ, ಉಪ್ಪೋಣಿ, ಹೊನ್ನಾವರ.
17. ಶ್ರೀ ಗಣೇಶ ಪಂಡಿತ, ಕರ್ಕಿನಾಕಾ, ಹೊನ್ನಾವರ

ಈ ಮೇಲಿನ ಎಲ್ಲಾ ಗ್ರಾಹಕರನ್ನು ಶ್ರೀಮತಿ ರಾಧಾ ಭಟ್ಟ, ಸಹಾಯಕ ಇಂಜಿನೀಯರ್(ವಿ), ಹೊನ್ನಾವರ ಇವರು ಸದರಿ ಸಭೆಗೆ ಸ್ವಾಗತಿಸಿದರು.

1. ಶ್ರೀ ಎಸ್.ಕೆ. ಶೆಟ್ಟಿ, ಹಡಿನಬಾಳರವರು,

   - ಪರಿವರ್ತಕ ಅಳವಡಿಸಿ ವಿದ್ಯುತ್ ಸರಬರಾಜು ನೀಡುವ ಕಾಮಗಾರಿ ಪೂರ್ಣಗೊಂಡಿದ್ದರು, ವಿದ್ಯುತ್ ಪರಿವೀಕ್ಷಕರ ಶುಲ್ಕ ಪಾವತಿಯಾಗದೇ ವಿದ್ಯುತ್ ಸಂಪರ್ಕ ನೀಡಲು ಸಾಧ್ಯವಾಗುತ್ತಿಲ್ಲ ಎಂದು ತಿಳಿಸಿದ್ದು, ಶುಲ್ಕ ಪಾವತಿಗೆ ವಿಳಂಬವಾಗಲು ಸಕಾರಣ ನೀಡಬೇಕಾಗಿ ಆಗ್ರಹಿಸಿದರು.

     **ಸಹಾಯಕ ಕಾರ್ಯನಿರ್ವಾಹಕ ಇಂಜಿನೀಯರ್(ವಿ), ರವರು ವಿಭಾಗೀಯ ಕಛೇರಿಗೆ ಶೀಘ್ರ ಶುಲ್ಕ ಪಾವತಿಗೆ ವಿನಂತಿಸಿ ಪತ್ರ ಬರೆಯಲಾಗುವುದು ಎಂದು ತಿಳಿಸಿದರು.**

   - ಉಪ–ವಿಭಾಗದ ಲಾರಿ ತುಂಬಾ ಹಳೆಯದ್ದಾಗಿದ್ದು, ಪದೇ ಪದೇ ರಿಪೇರಿಗೆ ಬರುತ್ತದೆ. ಕಡಿದಾದ ರಸ್ತೆ ತಿರುವು ಇರುವ ಕಡೆ ಲಾರಿ ಸಂಚಾರವಾಗದಂತಾಗಿದೆ. ಹಳೇ ಲಾರಿಗೆ ಎಷ್ಟೇ ರಿಪೇರಿ ಮಾಡಿದರೂ ಅದರ ಸ್ಥಿತಿ ಸುಧಾರಿಸುವುದಿಲ್ಲ. ನಿಗಮದ ಹಣವನ್ನು ಹಳೇ ರಿಪೇರಿಗೆ ವ್ಯಯಿಸುವ ಬದಲು ಬದಲಿ ಗುತ್ತಿಗೆ ವಾಹನ ಪಡೆಯಲು ಅಥವಾ ಹೊಸ ಲಾರಿ ಖರೀದಿಸಲು ಕೋರಿದರು.

     **ಸಹಾಯಕ ಕಾರ್ಯನಿರ್ವಾಹಕ ಇಂಜಿನೀಯರ್(ವಿ), ರವರು ಮೇಲಾಧಿಕಾರಿಗಳೊಂದಿಗೆ ಸಮಾಲೋಚಿಸಿ ಕ್ರಮ ಕೈಗೊಳ್ಳುವುದಾಗಿ ತಿಳಿಸಿದರು.**

Scanned with CamScanner

ಹುಬ್ಬಳ್ಳಿ ವಿದ್ಯುತ್ ಸರಬರಾಜು
ಕಂಪನಿ ನಿಯಮಿತ
(ಕರ್ನಾಟಕ ಸರ್ಕಾರದ ಸಂಪೂರ್ಣ ಸ್ವಾಮ್ಯಕ್ಕೆ ಒಳಪಟ್ಟಿದೆ)
ಕಛೇರಿ,
ಸಹಾಯಕ ಕಾರ್ಯನಿರ್ವಾಹಕ ಇಂಜಿನೀಯರ್(ವಿ),
ಕಾರ್ಯ & ಪಾಲನಾ ಉಪ ವಿಭಾಗ,
ಹೊನ್ನಾವರ ಉತ್ತರ ಕನ್ನಡ(ಜಿ) ಪಿನ್-581 334
Tel: 08387- 223033

HUBLI ELECTRICITY SUPPLY COMPANY LIMITED
[Wholly owned Govt. of Karnataka undertaking]
Office of the,
Assistant Executive Engineer [Elec.]
O & M Sub Division,Honnavar.
[U.K] District -581 334
Web: www.hescom.co.in
E-mail: aeehnvr@gmail.com

Corporate Identify Number (CIN) : U31401KA2002SGC030437



- ಉಗ್ರಾಣದಲ್ಲಿ ಸಾಕಷ್ಟು ಸಾಮಗ್ರಿಗಳಿಲ್ಲ ಯಾವುದೇ ಹೊಸ ಕಾಮಗಾರಿಗೆ ಬಜೆಟ್ ಇಲ್ಲ ಎಂದು ಹೇಳುತ್ತೀರಿ. ಈ ರೀತಿಯಾದಲ್ಲಿ ಹೆಸ್ಕಾಂ ಯಾವ ರೀತಿಯಲ್ಲಿ ಕಾರ್ಯ ನಿರ್ವಹಿಸುತ್ತಿದೆ. ಯಾವುದೇ ಕಾಮಗಾರಿ ಕೆಲಸವಿಲ್ಲ ಎಂದಾದ ಮೇಲೆ ಇಷ್ಟೊಂದು ಹುದ್ದೆ ಜನರ ಕೆಲಸವೇನು.? ಎಂದು ಆಕ್ಷೇಪ ವ್ಯಕ್ತ ಪಡಿಸಿದರು.
  **ಸಹಾಯಕ ಕಾರ್ಯನಿರ್ವಾಹಕ ಇಂಜಿನೀಯರ್(ವಿ), ರವರು ಸಾಮಗ್ರಿ ಪೂರೈಕೆಗೆ ಕೋರಿಕೆ ಸಲ್ಲಿಸಲಾಗುವುದು. ಬಜೆಟ್ ನೀಡುವ ಬಗ್ಗೆಯೂ ಮೇಲಾಧಿಕಾರಿಗಳಿಗೆ ಮನವಿ ಸಲ್ಲಿಸಲಾಗುವುದು ಎಂದು ತಿಳಿಸಿದರು.**

2. ಶ್ರೀ ತಬ್ರೀಜ್ ಖಾನ, ಸರಳಗಿ ಹಾಗೂ ಇತರರು ಸರಳಗಿ 100ಕೆ.ವಿ.ಎ. ಪರಿವರ್ತಕ ವಿಫಲಗೊಂಡಿದ್ದು, ಶೀಘ್ರ ಬದಲಾಯಿಸಬೇಕಾಗಿ ಕೋರಿದರು.
   **ಸಹಾಯಕ ಕಾರ್ಯನಿರ್ವಾಹಕ ಇಂಜಿನೀಯರ್(ವಿ), ರವರು ಪರಿವರ್ತಕ ಬದಲಾವಣೆಗೆ ಅಂದಾಜು ಪತ್ರ ಸಲ್ಲಿಸಲಾಗಿದ್ದು, ಶೀಘ್ರ ಬದಲಾವಣೆ ಮಾಡಲಾಗುವುದು ಎಂದು ತಿಳಿಸಿದರು.**
3. ಶ್ರೀ ರಿಯಾಜ್ ಹುಸೇನ ಮತ್ತು ಉಪ್ಪೋಣಿ ಇತರ ಗ್ರಾಹಕರು ಗೇರುಸೊಪ್ಪ ಶಾಖಾಧಿಕಾರಿ ಆನಂದರಾವರವರು ಗ್ರಾಹಕರ ದೂರುಗಳಿಗೆ ಸರಿಯಾಗಿ ಸ್ಪಂದಿಸುತ್ತಿಲ್ಲ ಮತ್ತು ದೂರವಾಣಿಯಲ್ಲಿ ಗ್ರಾಹಕರೊಂದಿಗೆ ಸರಿಯಾಗಿ ವ್ಯವಹರಿಸುವುದಿಲ್ಲ. ಈ ಬಗ್ಗೆ ಎಲ್ಲಾ ಗ್ರಾಹಕರು ಆಕ್ಷೇಪ ವ್ಯಕ್ತಪಡಿಸಿ ಲಿಖಿತ ದೂರನ್ನು ಸಹಾಯಕ ಕಾರ್ಯ ನಿರ್ವಾಹಕ ಇಂಜಿನೀಯರ್(ವಿ), ರವರಿಗೆ ಸಲ್ಲಿಸಿದರು.
   **ಸಹಾಯಕ ಕಾರ್ಯನಿರ್ವಾಹಕ ಇಂಜಿನೀಯರ್(ವಿ), ರವರು ಆನಂದರಾವ್ ರವರಿಗೆ ಹಲವಾರು ಬಾರಿ ಮೌಖಿಕವಾಗಿ ಗ್ರಾಹಕರೊಂದಿಗೆ ಸೂಕ್ತ ರೀತಿಯಲ್ಲಿ ಸ್ಪಂದಿಸುವ ಬಗ್ಗೆ ನಿರ್ದೇಶನ ನೀಡಿದ್ದೇನೆ. ಈ ಬಗ್ಗೆ ಈ ಕಛೇರಿಯಿಂದಲೂ ಮತ್ತು ಮೇಲಾಧಿಕಾರಿಗಳಿಂದಲೂ ಸಹ ಸದರಿಯವರಿಗೆ ಎಚ್ಚರಿಕೆ ನೋಟೀಸ್ ನೀಡಲಾಗಿದೆ ಎಂದು ತಿಳಿಸಿದರು. ಹಾಗೂ ಆನಂದರಾವ್‌ರವರಿಗೆ ಮತ್ತೊಮ್ಮೆ ಗ್ರಾಹಕರೊಂದಿಗೆ ಸೂಕ್ತ ರೀತಿಯಲ್ಲಿ ವ್ಯವಹರಿಸುವ ಬಗ್ಗೆ ತಿಳಿ ಹೇಳಿದರು.**
4. ಶ್ರೀ ರಿಯಾಜ್ ಹುಸೇನ ಮತ್ತು ಉಪ್ಪೋಣಿ ಇತರ ಗ್ರಾಹಕರು ಉಪ್ಪೋಣಿಯಲ್ಲಿ ತೆಂಗಿನಮರ ಒಂದು ಲೈನಿಗೆ ತಾಗುತ್ತಿದ್ದು, 4ಪಿನ್ ಅಡ್ಡಪಟ್ಟಿ ಹಾಕಿ ಸರಿಪಡಿಸುವಂತೆ ಕೋರಿದರು.
   **ಶಾಖಾಧಿಕಾರಿ, ಗೇರುಸೊಪ್ಪರವರು ಶೀಘ್ರ ಸರಿಪಡಿಸುವುದಾಗಿ ತಿಳಿಸಿದರು.**
5. ಶ್ರೀ ಗಣೇಶ ಪಂಡಿತ ರವರು ಕರ್ಕಿನಾಕಾದಲ್ಲಿ ಲೂಸ್ ಸ್ಪ್ಯಾನ್ ಇದ್ದು, ಸರಿಪಡಿಸಬೇಕಾಗಿ ಕೋರಿದರು.
   **ಶಾಖಾಧಿಕಾರಿ, ಪಟ್ಟಣರವರು ಸ್ಥಳ ಪರಿಶೀಲಿಸಿ ಶೀಘ್ರ ಕ್ರಮ ಕೈಗೊಳ್ಳುವುದಾಗಿ ತಿಳಿಸಿದರು..**

ಸಹಾಯಕ ಕಾರ್ಯನಿರ್ವಾಹಕ ಇಂಜಿನೀಯರ(ವಿ)
ಹು.ವಿ.ಸ.ಕಂ.ನಿಯಮಿತ ಹೊನ್ನಾವರ.

ಪ್ರತಿಯನ್ನು ಗೌರವಪೂರಕವಾಗಿ:

1. ಮಾನ್ಯ ಮುಖ್ಯ ಇಂಜಿನೀಯರ್(ವಿ), ವಲಯ ಕಛೇರಿ, ಹೆಸ್ಕಾಂ, ಹುಬ್ಬಳ್ಳಿ.
2. ಮಾನ್ಯ ಅಧೀಕ್ಷಕ ಇಂಜಿನೀಯರ್(ವಿ), ವೃತ್ತ ಕಛೇರಿ, ಹೆಸ್ಕಾಂ, ಶಿರಸಿ.
3. ಮಾನ್ಯ ಕಾರ್ಯನಿರ್ವಾಹಕ ಇಂಜಿನೀಯರ್ (ವಿ), ಆರ್.ಎ., ನಿಗಮ ಕಛೇರಿ, ಹುಬ್ಬಳ್ಳಿ.
4. ಮಾನ್ಯ ಕಾರ್ಯನಿರ್ವಾಹಕ ಇಂಜಿನೀಯರ್ (ವಿ), ವಿಭಾಗ ಕಛೇರಿ, ಹೆಸ್ಕಾಂ, ಹೊನ್ನಾವರ.

ಪ್ರತಿ:

5. ಶಾಖಾಧಿಕಾರಿಗಳು, ಪಟ್ಟಣ, ಗ್ರಾಮೀಣ-1, ಗ್ರಾಮೀಣ-2, ಕಾಸರಕೋಡ, ಗೇರುಸೊಪ್ಪಾ ಶಾಖೆ, ಹೆಸ್ಕಾಂ, ಹೊನ್ನಾವರರವರ, ಮುಂದಿನ ಸ ಕ್ರಮಕ್ಕಾಗಿ ಹಾಗೂ ಕೈಗೊಂಡ ಕ್ರಮದ ಬಗ್ಗೆ ವರದಿ ನೀಡಲು ಸೂಚಿಸಿದೆ.
6. ಕಂದಾಯ ಶಾಖೆ, ಹೆಸ್ಕಾಂ, ಹೊನ್ನಾವರ ಇವರಿಗೆ ನೀಡುತ್ತಾ ಮುಂದಿನ ಸೂಕ್ತ ಕ್ರಮಕ್ಕಾಗಿ ಹಾಗೂ ಕೈಗೊಂಡ ಕ್ರಮದ ಬಗ್ಗೆ ವರದಿ ನೀ ಸೂಚಿಸಿದೆ.
7. ಕಛೇರಿ ಪ್ರತಿ.

Scanned with CamScanner